309.

ಕರ್ನಾಟಕ ಸರ್ಕಾರ

ಸಂ:ಸಕಇ 146 ಬಿಎಂಎಸ್ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,2ನೇ ಮಹಡಿ,
ಬೆಂಗಳೂರು, ದಿನಾಂಕ 17.06.2010.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ:
ವ್ಯವಸ್ಥಾಪಕ ನಿರ್ದೇಶಕರು,
ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ,
ಬೆಂಗಳೂರು.

ಮಾನ್ಯರೇ,

ವಿಷಯ: ಸಾಂಪ್ರದಾಯಿಕ ಕುಶಲ ಕರ್ಮಿಗಳಿಗೆ ಆರ್ಥಿಕ ನೆರವು ಒದಗಿಸಲು ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಣೆ, ಆರ್ಥಿಕ ನೆರವು ಮತ್ತು ಸಾರಾಯಿ ಮಾರಾಟದ ನಿಷೇಧದಿಂದ ನಿರುದ್ಯೋಗಿಗಳ ಪುನಶ್ಚೇತನಕ್ಕೆ ಆರ್ಥಿಕ ನೆರವು ಒದಗಿಸಲು ರೂಪಿಸಿರುವ ನಿಯಮ ಮತ್ತು ಮಾರ್ಗಸೂಚಿಗಳ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ದೇಹಿನಿ/ಸ/ಯೋ:ಸಂ-ದ-1&11ಬಿ/ಸಿಆರ್-6/10-11, ದಿ.17.05.2010

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಪತ್ರದ ಕಡೆ ಗಮನ ಸೆಳೆಯುತ್ತಾ, ತತ್ಸಂಬಂಧವಾಗಿ ದಿ.14.4.2010ರಂದು ನಡೆದ 138ನೇ ನಿರ್ದೇಶಕರ ಮಂಡಳಿಯು ಅನುಮೋದಿಸಿದಂತೆ ಮಾರ್ಗಸೂಚಿಗಳನ್ನು ತಮ್ಮ ಹಂತದಲ್ಲಿಯೇ ಜಾರಿಗೊಳಿಸುವಂತೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

**D. DEVARAJ URS BACKWARD CLASSES DEVELOPMENT CORPORATION**

(ಕರ್ನಾಟಕ ಸರ್ಕಾರದ ಉದ್ಯಮ) (A Government of Karnataka Undertaking)


ಸಂಖ್ಯೆ / No.: ದೇಹಿನಿ/ಸಮನ್ವಯ/ಸಿಆರ್-5/10-11

ದಿನಾಂಕ / Dated: 02/07/2010

ಎಲ್ಲಾ ಜಿಲ್ಲಾ ವ್ಯವಸ್ಥಾಪಕರುಗಳಿಗೆ
ಡಿ.ದೇವರಾಜ ಅರಸು ಹಿಂದುಳಿದ
ವರ್ಗಗಳ ಅಭಿವೃದ್ಧಿ ನಿಗಮ (ನಿ)

ಮಾನ್ಯರೆ,

ವಿಷಯ:- ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿಕಸುಬುದಾರರಿಗೆ ಆರ್ಥಿಕ ನೆರವು ಒದಗಿಸುವ ಯೋಜನೆಯ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ಜಾರಿಗೊಳಿಸುವ ಕುರಿತು.

ಉಲ್ಲೇಖ:- (1) ದಿ:14/04/2010ರಂದು ನಡೆದ ನಿಗಮದ ನಿರ್ದೇಶಕ ಮಂಡಳಿ ಸಭೆಯ ನಡುವಳಿ.

(2) ಸರ್ಕಾರದ ಪತ್ರ ಸಂಖ್ಯೆ/ಸಕಇ/146/ಬಿಎಂಎಸ್/2010 ದಿ:17/06/2010.

* * * * *

ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿಕಸುಬುದಾರರಿಗೆ ಆರ್ಥಿಕ ನೆರವು ಒದಗಿಸಲು ಅನುಷ್ಠಾನಗೊಳಿಸುತ್ತಿದ್ದ ಶ್ರಮಶಕ್ತಿ ಯೋಜನೆ ಹಾಗೂ ಸಾಂಪ್ರದಾಯಿಕ ವೃತ್ತಿದಾರರ ಯೋಜನೆಗಳೆರಡು ಹಿಂದುಳಿದ ವರ್ಗಗಳ ಕುಶಲಕರ್ಮಿಗಳಿಗೆ ಆರ್ಥಿಕ ನೆರವು ಒದಗಿಸುವ ಯೋಜನೆಗಳಾಗಿರುವುದರಿಂದ 2010-11ನೇ ಸಾಲಿಗೆ ಈ ಎರಡು ಯೋಜನೆಗಳನ್ನು ವಿಲೀನಗೊಳಿಸಿ ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿಕಸುಬುದಾರರಿಗೆ ಆರ್ಥಿಕ ನೆರವು ಎಂಬ ಶೀರ್ಷಿಕೆಯಡಿ ಯೋಜನೆಯನ್ನು ಮಾರ್ಪಡಿಸಿ ಮಾರ್ಗಸೂಚಿಗಳನ್ನು ರಚಿಸಿ ದಿ:14/04/2010ರಂದು ನಡೆದ ನಿರ್ದೇಶಕ ಮಂಡಳಿಯ ಅನುಮೋದನೆ ಪಡೆಯಲಾಗಿರುತ್ತದೆ. ಹಾಗೂ ಉಲ್ಲೇಖ (2)ರ ಸರ್ಕಾರದ ಪತ್ರದಲ್ಲಿ ನಿರ್ದೇಶಕ ಮಂಡಳಿಯು ಅನುಮೋದಿಸಿರುವಂತೆ ಈ ಯೋಜನೆಯ ಮಾರ್ಗಸೂಚಿಗಳನ್ನು ಜಾರಿಗೊಳಿಸುವಂತೆ ತಿಳಿಸಲಾಗಿರುತ್ತದೆ. ಆ ಅದರನ್ವಯ ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ವೃತ್ತಿದಾರರಿಗೆ ಆರ್ಥಿಕ ನೆರವು ಯೋಜನೆಯ ಮಾರ್ಗಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಈ ಯೋಜನೆಯ ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ನಿಗದಿಪಡಿಸಿ ಈಗಾಗಲೇ ಕಳುಹಿಸಲಾಗಿರುತ್ತದೆ. ನಿಗದಿತ ಕಾಲಮಿತಿಯೊಳಗೆ ಸದರಿ ಯೋಜನೆ ಅನುಷ್ಠಾನಕ್ಕೆ ಪರಿಣಾಮಕಾರಿಯಾಗಿ ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು


4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು-52. # 16 - D, 4th Floor, Devaraj Urs Bhavan, Miller Tank Bund Area, Vasanthanagar, Bangalore - 52.
Ph.: 080 - 22374632, 22374633, Fax : 080 - 22374634, Visit at www.dbcdc.in E-mail : md_dbcdc@vsnl.net

# I. ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ವೃತ್ತಿ ಕಸುಬುದಾರರಿಗೆ ಆರ್ಥಿಕ ನೆರವು ಒದಗಿಸುವ ಯೋಜನೆಯ ನಿಯಮಗಳು ಮತ್ತು ಮಾರ್ಗ ಸೂಚಿಗಳು:-

ಪ್ರಸ್ತಾವನೆ:-

ಸರ್ಕಾರದ ಹಂತದಲ್ಲಿ ಯೋಜನೆಗಳು ಡೂಪ್ಲಿಕೇಷನ್ ಆಗುತ್ತಿರುವ ಬಗ್ಗೆ ಗಮನಿಸಿ ಆದಷ್ಟು ಯೋಜನೆಗಳನ್ನು ಕ್ರೂಢೀಕರಿಸಿ ಅತಿ ಕಡಿಮೆ ಲೆಕ್ಕ ಶೀರ್ಷಿಕೆಗಳನ್ನು ಒಳಗೊಂಡಿರಬೇಕೆಂದು ಸೂಚಿಸಿರುವ ಹಿನ್ನೆಲೆಯಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಸಾಂಪ್ರದಾಯಿಕ ವೃತ್ತಿದಾರರಿಗೆ ಮತ್ತು ಕುಶಲ ಕರ್ಮಿಗಳಿಗೆ ಆರ್ಥಿಕ ಸೌಲಭ್ಯ ಒದಗಿಸಲು ಅನುಷ್ಠಾನಗೊಳಿಸುತ್ತಿರುವ ಒಂದೇ ತರಹದ ಎರಡು ಯೋಜನೆಗಳಾದ ಶ್ರಮಶಕ್ತಿ ಯೋಜನೆ ಮತ್ತು ಸಾಂಪ್ರದಾಯಿಕ ವೃತ್ತಿದಾರರ ಯೋಜನೆಯನ್ನು ವಿಲೀನಗೊಳಿಸಿ ಒಂದೇ ಯೋಜನೆಯನ್ನು ರೂಪಿಸುವಂತೆ ಸೂಚಿಸಲಾಗಿರುತ್ತದೆ. ಅದರಂತೆ 2010-11ರ ಆಯವ್ಯಯದಲ್ಲಿ ಶ್ರಮಶಕ್ತಿ ಯೋಜನೆ ಮತ್ತು ಸಾಂಪ್ರದಾಯಿಕ ಯೋಜನೆಯನ್ನು ವಿಲೀನಗೊಳಿಸಿದೆ. ಸಾಂಪ್ರದಾಯಿಕ ಕುಶಲ ಕರ್ಮಿಗಳು ಹಾಗೂ ವೃತ್ತಿ ಕಸುಬುದಾರರಿಗೆ ಆರ್ಥಿಕ ನೆರವು ಎಂಬ ನೂತನ ಯೋಜನೆ:-2225-03-190-0-03 ಎಂಬ ಲೆಕ್ಕ ಶೀರ್ಷಿಕೆಯಲ್ಲಿ 45.00ಕೋಟಿರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

1. ಈಯೋಜನೆಯ ಮುಖ್ಯ ಉದ್ದೇಶಗಳು:-

ರಾಜ್ಯದ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಸೇರಿದ ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿಕುಲಕಸುಬುದಾರರು ಕುಶಲಕರ್ಮಿಗಳು ಮತ್ತು ಸಾಂಪ್ರದಾಯಿಗಳ ಸೇವಾವೃತ್ತಿದಾರರು ತಮ್ಮ ವೃತ್ತಿಗೆ ಸಂಬಂಧಿಸಿದ ಆಧುನಿಕ ಉಪಕರಣಗಳನ್ನು ಖರೀದಿಸಲು, ಅವರ ತಾಂತ್ರಿಕತೆಯನ್ನು ಮೇಲ್ದರ್ಜೆಗೇರಿಸಲು, ಕಾರ್ಯತಾಣಗಳನ್ನು ನಿರ್ಮಾಣ ಮಾಡಲು, ವಿನ್ಯಾಸ ಸುಧಾರಿಸಿಕೊಳ್ಳಲು, ಮಾರುಕಟ್ಟೆ ಅಭಿವೃದ್ಧಿಪಡಿಸಿಕೊಳ್ಳಲು ಅವರಿಗೆ ಸಹಾಯಧನ ಹಾಗೂ ರಿಯಾಯಿತಿ ಬಡ್ಡಿದರದಲ್ಲಿ ಆರ್ಥಿಕ ಸೌಲಭ್ಯ ನೀಡುವುದು ಯೋಜನೆಯ ಉದ್ದೇಶಗಳಾಗಿದೆ.

2. ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:-

(1) ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ದಿನಾಂಕ:30/03/2002ರ ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ/225/ಬಿ.ಸಿ.ಎ/2000 ಆದೇಶದಲ್ಲಿ ಗುರ್ತಿಸಿದ ಅಥವಾ ಸರ್ಕಾರವು ಕಾಲಕಾಲಕ್ಕೆ ಗುರ್ತಿಸಿ ಅಂಗೀಕರಿಸಿದ ಹಿಂದುಳಿದ ವರ್ಗಗಳ ವರ್ಗ-1, ವರ್ಗ-2ಎ, 3ಎ ಮತ್ತು 3ಬಿ ಗುಂಪಿಗೆ ಸೇರಿದವರಾಗಿರಬೇಕು.

(2) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ 22,000/-ರೂ.ಗಳಿಗಿಂತ ಕಡಿಮೆ ಇರಬೇಕು.

(3) ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 15 ವರ್ಷ ವಾಸವಾಗಿರಬೇಕು.

(4) ಪ್ರಸ್ತುತ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಸಾಂಪ್ರದಾಯಿಕ ವೃತ್ತಿದಾರರು/ಕುಶಲಕರ್ಮಿಗಳು ವೃತ್ತಿಗಳನ್ನು ಮಾಡುತ್ತಿರ ಬೇಕು.

(5) ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳ ವಯೋಮಿತಿಯೊಳಗಿರಬೇಕು.

(6) ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಯಲ್ಲಿ ಸಾಲ ಅಥವಾ ಇತರ ಆರ್ಥಿಕ ಸವಲತ್ತು ಪಡೆಯಿರಬಾರದು.

(7) ಯೋಜನೆಯಲ್ಲಿ ಶೇ. 33ರಷ್ಟನ್ನು ಮಹಿಳೆಯರಿಗೆ ಮೀಸಲು ನೀಡಬೇಕು.

(8) ಅರ್ಜಿದಾರರು ಬ್ಯಾಂಕ್ ಉಳಿತಾಯ ಖಾತೆಯನ್ನು/ಚಾಲ್ತಿ ಖಾತೆ ಹೊಂದಿರಬೇಕು.

(9) ಕಾರ್ಯಾಗಾರ ನಿರ್ಮಾಣಕ್ಕೆ ಸಾಲಪಡೆಯ ಬಯಸುವವರು ಸ್ವಂತ ನಿವೇಶನ ಹೊಂದಿರಬೇಕು.

3. <u>ಯೋಜನೆಯ ಉದ್ದೇಶಕ್ಕಾಗಿ ಗುರ್ತಿಸಲಾದ ಅರ್ಹ ಪರಂಪರಾಗತ ಕುಶಲಕರ್ಮಿಗಳು/ವೃತ್ತಿ ಕುಲಕಸುಬುಗಳು:-</u>

(1) ಸಾಂಪ್ರದಾಯಿಕ ಕುಶಲ ಕರ್ಮಿಗಳು ಹಾಗೂ ವೃತ್ತಿ ಕಸುಬುದಾರರಿಗೆ ಆರ್ಥಿಕ ನೆರವು ಯೋಜನೆಗೆ ಈ ಕೆಳಗೆ ತಿಳಿಸಿರುವ ಒಟ್ಟು 47 ಸಾಂಪ್ರದಾಯಿಕ ವೃತ್ತಿ/ವೃತ್ತಿಕಸುಬುದಾರರನ್ನು ಈ ಯೋಜನೆ ವ್ಯಾಪ್ತಿಗೆ ಒಳಪಡಿಸುವುದು.

1. ಬಡಗಿ ಕೆಲಸ/ಮರದ ಕೆತ್ತನೆ ಕೆಲಸ
2. ಉಣ್ಣೆ ಮತ್ತು ಕಂಬಳಿ ನೇಯ್ಗೆ ತಯಾರಿಕೆ
3. ಅಡಿಕೆ ಹಾಳೆಯಿಂದ ತಟ್ಟೆ ತಯಾರಿಕೆ
4. ಉಣ್ಣೆ ನೇಯ್ಗೆ ಮತ್ತು ಹಾಸು ಕಂಬಳಿ ತಯಾರಿಕೆ
5. ಸಿಲ್ಕ್ ರೀಲಿಂಗ್ ಮತ್ತು ಸಿಲ್ಕ್ ಟ್ವಿಸ್ಟಿಂಗ್ ಕೆಲಸ
6. ಪೊರಕೆ ಕಡ್ಡಿ ತಯಾರಿಕೆ
7. ಬಿದರಿ ವೇರ್ ಕೆಲಸ
8. ಸುಣ್ಣ ಸುಡುವುದು
9. ಕ್ಷೌರಿಕ ವೃತ್ತಿ/ಸೆಲೂನ್
10. ವಾಲಗ ಊದುವುದು
11. ದನಗಾಹಿ ವೃತ್ತಿ
12. ಬಳೆ ವ್ಯಾಪಾರ/ಮೇಣದ ಬತ್ತಿ
13. ಚಿನ್ನಬೆಳ್ಳಿ ಕೆಲಸ, ಕಂಚು ಕೆಲಸ.
14. ನಾರಿನಿಂದ ವಿವಿಧ ಉತ್ಪನ್ನ ತಯಾರಿಕೆ
15. ಕಮ್ಮಾರಿಕೆ/ಕುಲುಮೆ
16. ಬೆತ್ತದ ಕೆಲಸ(ರಟ್ಟನ್)
17. ಆಟಿಕೆ/ಗೊಂಬೆ ತಯಾರಿಕೆ ಮತ್ತು ಕೆತ್ತನೆ ಕೆಲಸ
18. ಟಿನ್ ವಸ್ತುಗಳ ತಯಾರಿಕೆ
19. ಜೇನು ಸಾಕಾಣಿಕೆ
20. ನಿಟ್ಟಿಂಗ್ ಕೆಲಸ
21. ಗಾಣದ ಕೆಲಸ
22. ಮೆಷನರಿ ವರ್ಕ್ಸ್
23. ಹೂಕಟ್ಟುವ ವೃತ್ತಿ
24. ಟೈಲರಿಂಗ್
25. ಕುಂಬಾರಿಕೆ/ಕಲಾತ್ಮಕ ಮಡಿಕೆ
26. ಹತ್ತಿ ನೇಯ್ಗೆ/ನೇಕಾರಿಕೆ.
27. ಚರ್ಮದ ವಸ್ತುಗಳ ತಯಾರಿಕ
28. ಅಗರಭತ್ತಿ ತಯಾರಿಕೆ
29. ಕಾಯರ್ ಫೈಬರ್ ತಯಾರಿಕೆ
30. ವಿಗ್ರಹ/ಕಲ್ಲು ಕೆತ್ತನೆ ಕೆಲಸಗಳು
31. ಲಾಂಡ್ರಿ/ದೋಬಿ ಕೆಲಸ
32. ಮೀನುಗಾರಿಕೆ
33. ನಾಟಿ ಔಷದಿ
34. ಬಣ್ಣ/ಶೃಂಗಾರ ಮಾಡುವ ವೃತ್ತಿ
35. ಶೀಟ್ ಮೆಟಲ್ ವೃತ್ತಿ
36. ಬಣ್ಣಗಾರಿಕೆ ಮತ್ತು ಮುದ್ರಣಗಾರಿಕೆ
37. ಮ್ಯಾಟ್ ತಯಾರಿಕೆ
38. ಬೆತ್ತ ಮತ್ತು ಬಿದಿರು ಕೆಲಸ
39. ಗಾಡಿ/ರಥ ತಯಾರಿಕೆ
40. ಗ್ಲಾಸ್ ಬೀಡ್ಸ್ ತಯಾರಿಕೆ
41. ಮೆಟಲ್ ಕ್ರಾಫ್ಟ್ ಕೆಲಸ
42. ಹೊಸ್ಯೆರಿ ವಸ್ತುಗಳ ತಯಾರಿಕೆ
43. ಪಾತ್ರೆಗಳಿಗೆ ಕಲಾಯಿ
44. ವಾದ್ಯ ವೃಂದ ವೃತ್ತಿ
45. ಗೌಳಿ ವೃತ್ತಿ(ಹೈನುಗಾರಿಕೆ)
46. ಬೈಸಿಕಲ್/ಆಟೋಮೊಬೈಲ್ ರಿಪೇರಿ ವರ್ಕ್ಸ್
47. ವೆಲ್ಡಿಂಗ್ ವರ್ಕ್ಸ್

ಮುಂತಾದ ಕರಕುಶಲ ವೃತ್ತಿಗಳಿಗೆ ಮಾತ್ರ ಈ ಯೋಜನೆಯಲ್ಲಿ ಸೌಲಭ್ಯ ಪಡೆಯಬಹುದು. ಕುಶಲಕರ್ಮಿಗಳು ವೃತ್ತಿಗಳಲ್ಲದೆ ಇತರೆ ಉದ್ದೇಶಗಳಿಗೆ ಆರ್ಥಿಕ ನೆರವನ್ನು ಈ ಯೋಜನೆಯಲ್ಲಿ ಪಡೆಯಲು ಅವಕಾಶವಿರುವುದಿಲ್ಲ.

4. ಘಟಕ ವೆಚ್ಚ, ಸಾಲದ ಮೊತ್ತ ಮತ್ತು ಸಹಾಯ ಧನ:-

(1)ಆಧುನಿಕ ಉಪಕರಣಕೊಳ್ಳಲು ಮತ್ತು ದುಡಿಮೆ ಬಂಡವಾಳಕ್ಕೆ:- ಹಿಂದುಳಿದ ವರ್ಗಗಳಿಗೆ ಸೇರಿದ ಕುಶಲಕರ್ಮಿಗಳು ಮತ್ತು ಸಾಂಪ್ರದಾಯಿಕ ವೃತ್ತಿದಾರರಿಗೆ ಯೋಜನೆಯ ಉದ್ದೇಶಗಳಿಗಾಗಿ ಆರ್ಥಿಕ ನೆರವನ್ನು ಆಯಾ ವೃತ್ತಿ/ಕುಲಕಸುಬಿಗೆ ಆಯಾ ಪ್ರದೇಶ ಹಾಗೂ ಅರ್ಜಿದಾರರು ಕೈಗೊಳ್ಳುವ ವೃತ್ತಿ ಕಸುಬಿಗೆ ಅವಶ್ಯವಿರುವ ಆಧುನಿಕ ಉಪಕರಣಗಳ ಮೊತ್ತ ಮತ್ತು ದುಡಿಮೆ ಬಂಡವಾಳಕ್ಕಾಗಿ ಗರಿಷ್ಟ 5000/-ರೂ.ಗಳ ಸಹಾಯಧನ ಹಾಗೂ ಗರಿಷ್ಠ 30,000/-ರೂ.ಗಳ ಸಾಲವನ್ನು ನೀಡುವುದು. ಸಾಲ ನೀಡುವಾಗ ಆರ್ಥಿಕ ಸಮಂಜಸತೆ, ಲಾಭದಾಯಕತೆ ಹಾಗೂ ಮಾರುಕಟ್ಟೆಯನ್ನು ಪರ್ಯಾಲೋಚಿಸಿ ಆಯ್ಕಾ ಸಮಿತಿಯು ಆಯಾ ವೃತ್ತಿಯ ಘಟಕ ವೆಚ್ಚಕ್ಕೆ ಅಗತ್ಯವಿರುವ ಉಪಕರಣಗಳ ವೆಚ್ಚಕ್ಕೆ ಮತ್ತು ದುಡಿಮೆ ಬಂಡವಾಳಕ್ಕೆ ಆರ್ಥಿಕ ನೆರವು ಒದಗಿಸುವುದು.

5. ಬಡ್ಡಿಯ ದರ ಮತ್ತು ಮರುಪಾವತಿ ಅವಧಿ:- ಈ ಯೋಜನೆಯಲ್ಲಿ ಕೊಡುವ ಸಾಲಕ್ಕೆ ವಾರ್ಷಿಕ ಶೇ.4ರಂತೆ ಸರಳ ಬಡ್ಡಿಯನ್ನು ವಿಧಿಸಲಾಗುತ್ತದೆ. ಘಟಕ ವೆಚ್ಚಕ್ಕೆ ಅನುಗುಣವಾಗಿ ಸೂಕ್ತವಾದ ಮರುಪಾವತಿ ಅವಧಿಯನ್ನು ಆಯ್ಕೆ ಸಮಿತಿಯು ನಿಗಧಿಪಡಿಸುವುದು. ಆದರೆ ಈ ಮರುಪಾವತಿ ಅವಧಿಯು ಗರಿಷ್ಠ 3 ವರ್ಷಗಳಾಗಿವೆ. ಸಾಲ ಬಿಡುಗಡೆಯಾದ ದಿನಾಂಕದಿಂದ 2 ತಿಂಗಳ ವಿರಾಮಾವಧಿಯನ್ನು ನೀಡಲಾಗುತ್ತದೆ ಹಾಗೂ ನಂತರ 34 ತಿಂಗಳ ಅವಧಿಯಲ್ಲಿ ಸಾಲವನ್ನು ಫಲಾನುಭವಿಗಳು ಮರುಪಾವತಿಸಬೇಕು. ನಿಗಧಿತ ಕಂತುಗಳ ಅನ್ವಯ ಮರುಪಾವತಿ ಮಾಡದಿದ್ದರೆ ಬಾಕಿಯಾಗುವ/ಸುಸ್ತಿಯಾಗುವ ಸಾಲದ ಮೊತ್ತಕ್ಕೆ ವಾರ್ಷಿಕ ಶೇ.2ರಷ್ಟು ಸುಸ್ತಿ ಬಡ್ಡಿಯನ್ನು ವಿಧಿಸಲಾಗುತ್ತದೆ.

6. ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:- ಹಿಂದುಳಿದ ವರ್ಗಗಳಿಗೆ ಸೇರಿದ ಕುಶಲ-ಕರ್ಮಿಗಳು, ಸಾಂಪ್ರದಾಯಿಕ ವೃತ್ತಿದಾರ ಅರ್ಜಿದಾರರು ನಿಗಧಿಪಡಿಸಿದ ದ್ವಿಪ್ರತಿಯಲ್ಲಿರುವ ನಿಗಧಿತ ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಈ ಕೆಳಕಂಡ ದಾಖಲಾತಿಗಳೊಂದಿಗೆ ಅರ್ಜಿಗಳನ್ನು ಆಯ್ಕಾ ಸಮಿತಿಗೆ/ಜಿಲ್ಲಾ ಕಛೇರಿಗೆ ಸಲ್ಲಿಸಬೇಕು.

1. ಹಿಂದುಳಿದ ವರ್ಗಕ್ಕೆ ಸೇರಿರುವುದಕ್ಕೆ ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರ್‌ರವರಿಂದ ನಿಗಧಿತ ನಮೂನೆಯಲ್ಲಿ ಪಡೆದ ಜಾತಿ ಪ್ರಮಾಣ ಪತ್ರ ಮತ್ತು ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಪ್ರಮಾಣ ಪತ್ರ.
2. ಅರ್ಜಿದಾರರು ವಾಸಿಸುತ್ತಿರುವ ವಿಳಾಸದ ಪುರಾವೆಗಾಗಿ ಪಡಿತರ ಚೀಟಿ/ಫೋಟೋ ಗುರುತಿನ ಚೀಟಿ/ವಾಸಸ್ಥಳ ದೃಢೀಕರಣ ಪತ್ರ.
3. ಅರ್ಜಿದಾರರ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 5 ಫೋಟೋಗಳು(ದ್ವಿ ಪ್ರತಿಯಲ್ಲಿರುವ ಅರ್ಜಿಗೆ ತಲಾ ಒಂದೊಂದು, ಸಾಲದ ಖಾತಾ ಪುಸ್ತಕಕ್ಕೆ ಒಂದು ಹಾಗೂ ಸಾಲದ ದಸ್ತಾವೇಜುಗಳಿಗೆ ಒಂದು).
4. ಅರ್ಜಿದಾರರ ಮತ್ತು ಜಾಮೀನುದಾರರು ಆಸ್ತಿ ಮತ್ತು ಋಣಭಾರದ ಘೋಷಣೆಗಳನ್ನು ಸಲ್ಲಿಸಬೇಕು.
5. ಅರ್ಜಿದಾರರು ಸ್ಥಳೀಯ ಬ್ಯಾಂಕ್/ಹಣಕಾಸು ಸಂಸ್ಥೆಗಳಲ್ಲಿ ಸಾಲ ಹೊಂದಿಲ್ಲದಿರುವುದಕ್ಕೆ/ ಸುಸ್ತಿದಾರರಲ್ಲವೆಂಬುದಕ್ಕೆ ಬೇಬಾಕಿ ಪ್ರಮಾಣ ಪತ್ರ.
6. ಅರ್ಜಿದಾರರು ಪಡೆಯುವ ಸಾಲಕ್ಕೆ ಸಾಲ ತೀರಿಸುವ ಸಾಮರ್ಥ್ಯವುಳ್ಳ ಒಬ್ಬ ಜಾಮೀನುದಾರನಿಂದ ಒಪ್ಪಿಗೆ ಪತ್ರ.

7. ಅರ್ಜಿದಾರರು ಕೈಗೊಳ್ಳುವ ವೃತ್ತಿಯಲ್ಲಿ/ಕರಕುಶಲ ಕಲೆಯಲ್ಲಿ ಹೊಂದಿರುವ ಅನುಭವದ ಸರ್ಟಿಫಿಕೇಟ್ ಅಥವಾ ಅರ್ಜಿದಾರರಿಂದ ಸ್ವಯಂ ಘೋಷಣಾ ಪತ್ರ ಅಥವಾ ಅರ್ಜಿದಾರರು ಸೂಕ್ತ ಪ್ರಾಧಿಕಾರದಿಂದ ತರಬೇತಿ ಪಡೆದಿದ್ದರೆ ಹೊಂದಿರುವ ತರಬೇತಿ ಸರ್ಟಿಫಿಕೇಟ್ ಲಗತ್ತಿಸಬೇಕು.
8. ಸಾಂಪ್ರದಾಯಿಕ ಕುಶಲಕರ್ಮಿಗಳು/ವೃತ್ತಿ ಕಸುಬಿಗೆ ಅವಶ್ಯವಿರುವ ಆಧುನಿಕ ಉಪಕರಣಗಳನ್ನು ಕಡ್ಡಾಯವಾಗಿ ಕೊಂಡುಕೊಳ್ಳಲು ಮಾತ್ರ ಈ ಯೋಜನೆಯಲ್ಲಿ ಸಾಲವನ್ನು ನೀಡಲಾಗುತ್ತಿದೆ. ಆದ್ದರಿಂದ ಆಧುನಿಕ ಉಪಕರಣಗಳನ್ನು ಸರಬರಾಜು ಮಾಡುವ ಕಂಪನಿಗಳು, (ಸೇಲ್ಸ್ ಟ್ಯಾಕ್ಸ್/ಕಮರ್ಶಿಯಲ್ ಟ್ಯಾಕ್ಸ್ ಇಲಾಖೆಯಿಂದ ನೊಂದಾಯಿಸಲ್ಪಟ್ಟಿರುವ) ಪಡೆದ ಇನ್‌ವಾಯ್ಸ್‌ನ್ನು ಲಗತ್ತಿಸಬೇಕು.
9. ಬ್ಯಾಂಕ್ ಶಾಖೆಯಲ್ಲಿ ಹೊಂದಿರುವ ಉಳಿತಾಯ/ಚಾಲ್ತಿ ಖಾತೆಯ ಪಾಸ್‌ಪುಸ್ತಕದ ಜೆರಾಕ್ಸ್ ಪ್ರತಿ ದೃಢೀಕರಣಕ್ಕಾಗಿ.

## 7. <u>ಫಲಾನುಭವಿಗಳ ಆಯ್ಕೆ ಮತ್ತು ಸಾಲ ಮಂಜೂರಾತಿಯ ವಿಧಾನ</u>

ದಿನಾಂಕ:02/01/2009ರ ಸರ್ಕಾರದ ಆದೇಶ ಸಂಖ್ಯೆ/ಸಕಇ/221/ಬಿಸಿಎ/2008ರ ಆದೇಶದಲ್ಲಿ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕಾ ಸಮಿತಿಯು ಈ ಯೋಜನೆಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ, ಸಾಲ/ಸೌಲಭ್ಯ ಮಂಜೂರಾತಿ ಮಾಡುವುದು. ಸಮಿತಿಯ ಪರವಾಗಿ ಜಿಲ್ಲಾ ವ್ಯವಸ್ಥಾಪಕರು ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ನಿಗದಿತ ಅವಧಿಯೊಳಗೆ ಅರ್ಜಿಗಳನ್ನು ಸ್ವೀಕರಿಸುವುದು. ಪರಿಶೀಲಿಸಿ ಸಮಿತಿಯ ಮುಂದೆ ಮಂಡಿಸಿ ಆಯಾ ವಿಧಾನಸಭಾ ಕ್ಷೇತ್ರಕ್ಕೆ ನಿಗದಿಪಡಿಸಿದ ಗುರಿಯಂತೆ ಫಲಾನುಭವಿಗಳನ್ನು ಆಯ್ಕೆ ಮಾಡಿ ಸಾಲ ಮತ್ತು ಸಹಾಯಧನ ಮಂಜೂರು ಮಾಡಿದ ಪ್ರಸ್ತಾವನೆಯನ್ನು ನಿಗಮದ ಕೇಂದ್ರ ಕಛೇರಿಗೆ ಬಿಡುಗಡೆಗೆ ಕಳುಹಿಸಬೇಕು.

## <u>8. ಸಾಲ ಮಂಜೂರಾತಿ ವಿಧಾನ</u>

(1) ವಿಧಾನಸಭಾ ಕ್ಷೇತ್ರದ ಆಯ್ಕಾ ಸಮಿತಿಯು ಆಯ್ಕೆ ಮಾಡಿ ಸಾಲ ಮಂಜೂರು ಮಾಡಿದ ಫಲಾನುಭವಿಗಳಿಗೆ ಜಿಲ್ಲಾ ವ್ಯವಸ್ಥಾಪಕರು ನಿಗಮದ ಕೇಂದ್ರ ಕಛೇರಿಗೆ ಸಹಾಯಧನ ಮತ್ತು ಸಾಲ ಬಿಡುಗಡೆ ಕೋರಿ ಅರ್ಜಿದಾರರ ಹೆಸರು ಮತ್ತು ವಿಳಾಸ ಜಾತಿ ಆದಾಯ, ಸಾಲದ ಉದ್ದೇಶ, ಸಹಾಯಧನ, ಸಾಲದ ಮೊತ್ತ(ಆಧುನಿಕ ಉಪಕರಣಗಳ ಇನ್‌ವಾಯ್ಸ್‌ನ ಮೊತ್ತ ದುಡಿಮೆ ಬಂಡವಾಳ), ಜಾಮೀನುದಾರರ ಹೆಸರು, ಅರ್ಜಿದಾರರು ಸಲ್ಲಿಸಿರುವ ಇನ್‌ವಾಯ್ಸ್‌ದಾರ ಕಂಪನಿಯ ಹೆಸರು ಇನ್‌ವಾಯ್ಸ್‌ನ ಸಂಖ್ಯೆ ಮತ್ತು ದಿನಾಂಕ ಹಾಗೂ ಇನ್‌ವಾಯ್ಸ್‌ನ ಮೊತ್ತ ಮತ್ತು ವಿಳಾಸ, ಬ್ಯಾಂಕ್ ಶಾಖೆಯ ಹೆಸರು ಮತ್ತು ಖಾತಾ ಸಂಖ್ಯೆ ಈ ವಿವರಗಳನ್ನೊಳಗೊಂಡ ಪ್ರಸ್ತಾವನೆಗಳನ್ನು ನಿಗಮದ ಕೇಂದ್ರ ಕಛೇರಿಗೆ ಕಳುಹಿಸಬೇಕು.

ಕೇಂದ್ರ ಕಛೇರಿಯಲ್ಲಿ ಜಿಲ್ಲಾ ವ್ಯವಸ್ಥಾಪಕರಿಂದ ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಹಾಯಧನ ಮತ್ತು ಸಾಲವನ್ನು ಮಂಜೂರು ಮಾಡಿ ಉಪಕರಣಗಳಿಗೆ ಸಂಬಂಧಿಸಿದ ಮೊತ್ತವನ್ನು ಸರಬರಾಜುದಾರರ ಹೆಸರಿಗೆ ಚೆಕ್ ರಚಿಸಿ ಹಾಗೂ ದುಡಿಮೆ ಬಂಡವಾಳಕ್ಕೆ ಫಲಾನುಭವಿಯ ಹೆಸರಿಗೆ ಚೆಕ್ ರಚಿಸಿ ಮಂಜೂರಾತಿ ಆದೇಶದೊಂದಿಗೆ ಜಿಲ್ಲಾ ಕಛೇರಿಗೆ ಬಿಡುಗಡೆ ಮಾಡಲಾಗುವುದು.

9. ಸಾಲಕ್ಕೆ ಪಡೆಯಬೇಕಾದ ದಸ್ತಾವೇಜುಗಳು:-

(1) ಫಲಾನುಭವಿಗೆ ಸಾಲದ ಚೆಕ್ಕನ್ನು ವಿತರಿಸುವ ಮುನ್ನ ದಿನಾಂಕ:07/03/2003ರ ನಿಗಮದ ಸುತ್ತೋಲೆ (ಪರಿಷ್ಕೃತ ದಸ್ತಾವೇಜು) ಅನ್ವಯ ಈ ಕೆಳಕಂಡ ದಸ್ತಾವೇಜುಗಳನ್ನು ಪ್ರತಿ ಫಲಾನುಭವಿಯಿಂದ ಹಾಗೂ ಜಾಮೀನುದಾರರಿಂದ ಸಾಲಕ್ಕೆ ಪಡೆದುಕೊಳ್ಳಬೇಕು.

ಅ. ಪ್ರಾಮಿಸರಿ ನೋಟ್
ಆ. ಡಿ.ಪಿ.ನೋಟ್ ಡೆಲಿವರಿ ಲೆಟರ್
ಇ. ಲೆಟರ್ ಆಫ್ ರೀಪೇಮೆಂಟ್
ಈ. ಹೈಪಾಥೀಕೇಷನ್ ಡೀಡ್
} ಸಾಲಗಾರರಿಂದ ಪಡೆಯುವುದು.
ಉ. ಲೆಟರ್ ಆಫ್ ಗ್ಯಾರಂಟಿ (ಜಾಮೀನುದಾರರಿಂದ)
ಊ. ಸಹಾಯಧನ ವಿತರಣಾ ಪ್ರಮಾಣ ಪತ್ರ.

(2) ಈ ದಸ್ತಾವೇಜುಗಳ ಅವಧಿ ಲಿಮಿಟೇಷನ್ ಆಕ್ಟ್‌ಅನ್ವಯ 3 ವರ್ಷಗಳ ಮಿತಿಗೆ ಒಳಪಡುತ್ತದೆ. ಆದ್ದರಿಂದ ಈ 3 ವರ್ಷಗಳ ಅವಧಿಯೊಳಗೆ ಸಾಲವು ಮರುಪಾವತಿಯಾಗದಿದ್ದ ಸಂದರ್ಭದಲ್ಲಿ ಫಲಾನುಭವಿಗಳಿಂದ ಹಾಗೂ ಜಾಮೀನುದಾರರಿಂದ ಎ.ಓ.ಡಿಗಳನ್ನು (Acknowledgement of Debt) ಪಡೆಯಬೇಕು.

10. ಸಾಲ ವಿತರಣೆ ಮತ್ತು ಉಪಯೋಗದ ಬಗ್ಗೆ ಘಟಕ ತಪಾಸಣೆ ವರದಿ:-

ಈ ಮೇಲ್ಕಂಡ ದಸ್ತಾವೇಜುಗಳನ್ನು ಪಡೆದ ನಂತರ ಕೇಂದ್ರ ಕಛೇರಿಯಿಂದ ಸಾಲ ಮಂಜೂರಾತಿ ಆದೇಶದೊಂದಿಗೆ ಬಿಡುಗಡೆ ಮಾಡಿದ ಸಹಾಯಧನ/ಸಾಲದ ಮೊತ್ತದಲ್ಲಿ ಆಧುನಿಕ ಉಪಕರಣಗಳ ಮೊತ್ತದ ಚೆಕ್ಕನ್ನು ಉಪಕರಣಗಳನ್ನು ಸರಬರಾಜು ಮಾಡುವ ಕಂಪನಿಗೆ ಕಳುಹಿಸಬೇಕು. ಹಾಗೂ ದುಡಿಮೆ ಬಂಡವಾಳವನ್ನು ಅರ್ಜಿದಾರರಿಗೆ ವಿತರಿಸಬೇಕು. ಕಂಪನಿಯು ಇನ್‌ವಾಯ್ಸ್‌ನಲ್ಲಿ ತಿಳಿಸಿರುವ ಉಪಕರಣಗಳನ್ನು ಚೆಕ್ ಪಡೆದ ಒಂದುವಾರದೊಳಗೆ ಫಲಾನುಭವಿಗೆ ಕಡ್ಡಾಯವಾಗಿ ಸರಬರಾಜು ಮಾಡಬೇಕು. ಕಂಪನಿಯಿಂದ ಉಪಕರಣಗಳನ್ನು ಪಡೆದು ಘಟಕ ಸ್ಥಾಪಿಸಿದ ಬಗ್ಗೆ ಪರಿಶೀಲನೆ ಮಾಡಿ ದೃಢೀಕರಿಸಿಕೊಳ್ಳಬೇಕು.

11. ಸಾಲ/ಸಹಾಯಧನ ಖಾತಾ ಪುಸ್ತಕ ನಿರ್ವಹಣೆ:-

ಜಿಲ್ಲಾ ಸಮಿತಿಯಿಂದ ಆಯ್ಕೆಯಾದ ಫಲಾನುಭವಿಗಳಿಗೆ ಬಿಡುಗಡೆಯಾದ ಸಹಾಯಧನ ಮತ್ತು ಸಾಲದ ವಿವರಗಳನ್ನು ಫಲಾನುಭವಿಗಳ ಹಾಗೂ ಜಾಮೀನುದಾರರ ಪೂರ್ಣ ವಿವರಗಳನ್ನು ಮಂಜೂರಾತಿ ಆದೇಶ ಪತ್ರದಲ್ಲಿ ತಿಳಿಸಿರುವಂತೆ ನಿರ್ವಹಿಸುವುದು ಹಾಗೂ ಅರ್ಜಿದಾರರ, ಜಾಮೀನುದಾರರ ಭಾವಚಿತ್ರಗಳನ್ನು ಖಾತಾ ಪುಸ್ತಕದಲ್ಲಿ ಅಂಟಿಸುವುದು.

12. ಡಿ.ಸಿ.ಬಿ.ತಯಾರಿಸಿ ಸಾಲ ವಸೂಲಾತಿಗೆ ಕ್ರಮ:-

(ಅ) ಸಾಲ ಮಂಜೂರಾತಿ ಆದೇಶದಲ್ಲಿ ನಿಗದಿಪಡಿಸಿದ ಕಂತುಗಳನ್ವಯ ಅಸಲು ಮತ್ತು ಬಡ್ಡಿಯನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಮರುಪಾವತಿಸಬೇಕು. ವಿಳಂಬದ ಅವಧಿಗೆ ಶೇ.2ರಷ್ಟು ಸುಸ್ತಿ ಬಡ್ಡಿಯನ್ನು ವಿಧಿಸಿ ವಸೂಲಿ ಮಾಡಬೇಕು.

(ಆ) ಸಾಲ ಮರುಪಾವತಿಸದೆ ಸುಸ್ತಿಯಾದ ಫಲಾನುಭವಿಗಳಿಗೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಿ ಸಾಲ ವಸೂಲಾತಿಗೆ ಅಗತ್ಯ ಕ್ರಮವಹಿಸುವುದು.

13. **ಸಾಲವನ್ನು ಉಪಯೋಗಿಸದೇ ಇರುವುದು (Non-Utilisation):-**
ಈ ಯೋಜನೆಯಲ್ಲಿ ಫಲಾನುಭವಿಯು ಸಾಲ ಮಂಜೂರಾದ ಉದ್ದೇಶಕ್ಕೆ ಸಕಾಲದಲ್ಲಿ ಉಪಯೋಗಿಸದಿದ್ದರೆ ಅಥವಾ ಒಂದು ಪಕ್ಷ ಹಣವನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸಿರುವುದು ಕಂಡುಬಂದರೆ ಸರ್ಕಾರದ ಯೋಜನೆಯ ಮೂಲ ಉದ್ದೇಶಕ್ಕೆ ದಕ್ಕೆಯಾಗುತ್ತದೆ. ನಿಗಮದ ಅಧಿಕಾರಿಗಳು ಘಟಕ ಪರಿಶೀಲಿಸಿದಾಗ ನೀಡಿದ ಸಾಲವು ಮಂಜೂರಾದ ಉದ್ದೇಶಕ್ಕೆ ಬಳಸದೇ ಇರುವುದು, ಇಲ್ಲವೇ ಸದರಿ ಮೊತ್ತವನ್ನು ಮತ್ತೊಂದು ಉದ್ದೇಶಕ್ಕೆ ಉಪಯೋಗಿಸಿಕೊಂಡು ಸಾಲ ಮಂಜೂರಾತಿಯ ನಿಯಮಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಸಾಲಕ್ಕೆ ವಿಧಿಸಿದ ಬಡ್ಡಿ ದರದ ದುಪ್ಪಟ್ಟನ್ನು ವಿಧಿಸಿ ಪೂರ್ಣ ಸಾಲವನ್ನು ಒಂದೇ ಇಡಿಗಂಟಿನಲ್ಲಿ ವಸೂಲಿ ಮಾಡಲು ಕಾನೂನಿನ ಕ್ರಮ ಜರುಗಿಸಲಾಗುವುದು.

14. **ಸಾಲ ವಸೂಲಾತಿಗೆ ಕಾನೂನು ಕ್ರಮ:-**
ಈ ಯೋಜನೆಯಲ್ಲಿ ನಿಗದಿಪಡಿಸಿದ ಕಂತುಗಳನ್ವಯ ಫಲಾನುಭವಿಯು ಸಾಲ ಮರುಪಾವತಿ ಮಾಡಬೇಕು. ಮರುಪಾವತಿ ಮಾಡದಿದ್ದಲ್ಲಿ ಸಾಲವನ್ನು ವಸೂಲಿ ಮಾಡಲು ತೀವ್ರತರವಾದ ಕ್ರಮವನ್ನು ಜರುಗಿಸಬೇಕಾಗಿರುತ್ತದೆ. ಆ ಸಂಬಂಧವಾಗಿ ಸತತ 3 ಕಂತಗಳ ಮರುಪಾವತಿ ಬಾರದಿದ್ದರೆ ತಿಳುವಳಿಕೆ/ನೋಟೀಸನ್ನು ನೀಡಬೇಕು. ಫಲಾನುಭವಿಯನ್ನು ನಿಗಮದ ಅಧಿಕಾರಿಗಳು ಖುದ್ದಾಗಿ ಭೇಟಿ ಮಾಡಿ ಸಾಲ ಮರುಪಾವತಿಗೆ ಒತ್ತಾಯಿಸಬೇಕು. ಇದಕ್ಕೂ ಸ್ಪಂದಿಸದಿದ್ದಲ್ಲಿ ಸಾಲ ವಸೂಲಾತಿಗೆ ಕಾನೂನು ಕ್ರಮ ಕೈಗೊಳ್ಳಬೇಕು.

15. **ವಿಮೆ:-** ಈ ಯೋಜನೆಯಲ್ಲಿ ಪಡೆಯುವ ಸಾಲದಿಂದ ಉತ್ಪನ್ನವಾಗುವ ಆಸ್ತಿಯನ್ನು ಬೆಂಕಿ, ನೀರು, ಭೂಕಂಪ, ಕಳ್ಳತನ, ಇತ್ಯಾದಿ ಪ್ರಕೋಪಗಳಿಂದ ಆಗುವ ನಷ್ಟವನ್ನು ತಪ್ಪಿಸಲು ವಿಮೆ ಮಾಡಿಸಬೇಕು. ಆ ವಿಮಾ ಪ್ರೀಮಿಯಂ ಮೊತ್ತವನ್ನು ಫಲಾನುಭವಿಗಳು ಭರಿಸಬೇಕು.

16. **ಉದ್ಯಮ ಶೀಲತಾ ತರಬೇತಿ:-**
ಈ ಯೋಜನೆಯಲ್ಲಿ ಸಾಲ ಪಡೆದ ಆಯಾ ವಿಧಾನಸಭಾ ಕ್ಷೇತ್ರದ ಎಲ್ಲಾ ಫಲಾನುಭವಿಗೆ ಕನಿಷ್ಠ ಒಂದರಿಂದ ಎರಡು ದಿನ ಉದ್ಯಮ ಶೀಲತಾ ತರಬೇತಿಯನ್ನು ಏರ್ಪಡಿಸಬೇಕು. ಈ ತರಬೇತಿಯಲ್ಲಿ ಫಲಾನುಭವಿಯು ಸದುಪಯೋಗ ಪಡಿಸಿಕೊಳ್ಳುವ ಬಗ್ಗೆ, ಉತ್ಪನ್ನಗಳ ಮಾರುಕಟ್ಟೆಯ ಬಗ್ಗೆ, ನಿಗದಿತ ಕಂತುಗಳನ್ವಯ ಮರುಪಾವತಿ ಮಾಡುವ ಬಗ್ಗೆ ಮರುಪಾವತಿಸದಿದ್ದಲ್ಲಿ ಕಾನೂನು ಕ್ರಮ ಜರುಗಿಸುವ ಬಗ್ಗೆ ಮನದಟ್ಟಾಗುವ ಬಗ್ಗೆ ಅರಿವು ಮೂಡಿಸಬೇಕು.

17. **ನಿಯಮಗಳಿಗೆ ತಿದ್ದುಪಡಿ:-**
ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲು ಅಧಿಕಾರ ಹೊಂದಿರುತ್ತಾರೆ.

## II. ಸಾಂಪ್ರದಾಯಿಕ ವೃತ್ತಿದಾರರು/ವೃತ್ತಿ ಕಸುಬುದಾರರ ಕಾರ್ಯಗಾರ ನಿರ್ಮಾಣಕ್ಕೆ ಆರ್ಥಿಕ ನೆರವು ಒದಗಿಸುವ ಮಾರ್ಗಸೂಚಿಗಳು

1) ಘಟಕವೆಚ್ಚ:- ಗರಿಷ್ಟ 5000/-ರೂ.ಗಳ ಸಹಾಯಧನ ಹಾಗೂ 95000/-ರೂ.ಗಳ ಸಾಲ

2) ಬಡ್ಡಿದರ:- ಸಾಲಕ್ಕೆ ವಾರ್ಷಿಕ ಶೇ.4ರ ಬಡ್ಡಿಯನ್ನು ವಿಧಿಸುವುದು.

3) ಸೌಲಭ್ಯ ಪಡೆಯಲು ಅರ್ಜಿದಾರರ ಅರ್ಹತೆಗಳು:-

ಅ) ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರಬೇಕು.

ಆ) ವಾರ್ಷಿಕ ಆದಾಯ 22000/-ರೂ.ಗಳಿಗಿಂತ ಮೀರಿರಬಾರದು

ಇ) ಅರ್ಜಿದಾರರ ವಯೋಮಿತಿ 18 ರಿಂದ 55 ವರ್ಷಗಳೊಳಗಿರಬೇಕು.

ಈ) ಅರ್ಜಿದಾರರು ಸಾಂಪ್ರದಾಯಿಕ ವೃತ್ತಿದಾರರಾಗಿರಬೇಕು ಅಥವಾ ವೃತ್ತಿ ಕಸುಬನ್ನು ನಿರ್ವಹಿಸುತ್ತಿರಬೇಕು.

ಉ) ಅರ್ಜಿದಾರರು ಸ್ವತಃ ಮನೆ ಅಥವಾ ಪೂರ್ಣ ಪ್ರಮಾಣದ ಕಾರ್ಯಗಾರವನ್ನು ಹೊಂದಿರಬಾರದು.

ಊ) ಅರ್ಜಿದಾರರ ಅಥವಾ ಕುಟುಂಬದ ಸದಸ್ಯರ ಹೆಸರಿನಲ್ಲಿ ನಿವೇಶನ ಅಥವಾ ತಾತಾಲ್ಕಿಕ ಶೆಡ್ ಹೊಂದಿ ಕಾರ್ಯನಿರ್ವಹಿಸುತ್ತಿರಬೇಕು.

ಋ) ಕಾರ್ಯಗಾರ ನಿರ್ಮಾಣಕ್ಕೆ ಅಗತ್ಯವಿದ್ದಲ್ಲಿ ಗ್ರಾಮ ಪಂಚಾಯಿತಿ ಲೈಸನ್ಸ್ ಪಡೆಯಬೇಕು.

4) ಫಲಾನುಭವಿಯ ಆಯ್ಕೆ:- ಜಿಲ್ಲೆಗೆ ಈ ಯೋಜನೆಯಲ್ಲಿ ನಿಗದಿಪಡಿಸಿದ ಗುರಿಯಂತೆ ಅರ್ಜಿಗಳನ್ನು ಆಹ್ವಾನಿಸಿ ಅರ್ಹ ಅರ್ಜಿದಾರರ ಅರ್ಜಿಗಳನ್ನು ವಿಧಾನಸಭಾ ಕ್ಷೇತ್ರದ ಆಯ್ಕಾ ಸಮಿತಿಯ ಮುಂದೆ ಮಂಡಿಸಿ ಗುರಿಗೆ ಅನುಗುಣವಾಗಿ ಅನುಮೋದನೆ ಪಡೆದು ಆಯ್ಕೆ ಮಾಡಬೇಕು.

5) ಸಾಲ ಮಂಜೂರಾತಿ ವಿಧಾನ:- ಜಿಲ್ಲಾ ವ್ಯವಸ್ಥಾಪಕರು ಆಯ್ಕಾ ಸಮಿತಿಯಿಂದ ಅನುಮೋದನೆ ಪಡೆದ ಪ್ರಸ್ತಾವನೆಯನ್ನು ಮತ್ತು ಅರ್ಜಿದಾರರು/ಕುಟುಂಬದ ಸದಸ್ಯರು ಹೊಂದಿರುವ ನಿವೇಶನದ ಮೂಲ ದಾಖಲಾತಿಗಳನ್ನು ನಿಗಮದ ಕೇಂದ್ರ ಕಛೇರಿಗೆ ಕಳುಹಿಸಬೇಕು. ಕೇಂದ್ರ ಕಛೇರಿಯಲ್ಲಿ ಈ ದಾಖಲಾತಿಗಳನ್ನು ಪರಿಶೀಲಿಸಿ ಕಾರ್ಯಗಾರ ನಿರ್ಮಾಣಕ್ಕೆ 1.00 ಲಕ್ಷರೂ.ಗಳ ಆರ್ಥಿಕ ನೆರವು ಮಂಜೂರು ಮಾಡಲು ಆಡಳಿತಾತ್ಮಕ ಮಂಜೂರಾತಿ ಆದೇಶ ನೀಡುವುದು. ಅರ್ಜಿದಾರರು ನಿವೇಶನವನ್ನು ನಿಗಮದ ಹೆಸರಿಗೆ ಆಧಾರ ಮಾಡಿದ ಬಗ್ಗೆ ರಿಜಿಸ್ಟರ್ ಡೀಡ್‌ನ್ನು ಮತ್ತು ಇ.ಸಿ.ಯನ್ನು ಪಡೆದು ಜಿಲ್ಲಾ ವ್ಯವಸ್ಥಾಪಕರು ನಿಗಮದ ಕೇಂದ್ರ ಕಛೇರಿಗೆ ಕಳುಹಿಸಬೇಕು.

ಅರ್ಜಿದಾರರ ನಿರ್ಮಿಸ ಬಯಸುವ ಕಾರ್ಯಗಾರದ ನಕ್ಷೆ ಮತ್ತು ಅಂದಾಜು ವೆಚ್ಚವನ್ನು ನಿಗಮದ ಇಂಜಿನಿಯರಿಂಗ್ ವಿಭಾಗದಲ್ಲಿ ಪರಿಶೀಲನೆ ಮಾಡಿ ತಾಂತ್ರಿಕ ಅನುಮೋದನೆ ನೀಡುವುದು ಮತ್ತು ಅಡಿಪಾಯ ನಿರ್ಮಾಣಕ್ಕೆ ಶೇ.30ರಷ್ಟು 30000/-ರೂ.ಗಳನ್ನು ಬಿಡುಗಡೆ ಮಾಡಲಾಗುವುದು. 30000/-ರೂ.ಗಳನ್ನು ಫಲಾನುಭವಿಯು ವಿನಿಯೋಗಿಸಿ ನಿರ್ಮಾಣ ಮಾಡಿದ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಸ್ಥಳ ಪರಿಶೀಲನೆ ಮಾಡಿ ವರದಿ ನೀಡಿದ ನಂತರ ಕಟ್ಟಡ ನಿರ್ಮಾಣಕ್ಕೆ ಮೇಲ್ಛಾವಣಿ ಹಂತದವರೆಗೆ 45000/-ರೂ.ಗಳನ್ನು ಬಿಡುಗಡೆ ಮಾಡಲಾಗುವುದು. 45000/-ರೂ.ಗಳನ್ನು ವಿನಿಯೋಗಿಸಿ ಕಟ್ಟಡ ನಿರ್ಮಿಸಿ ಮೇಲ್ಛಾವಣಿ ಹಾಕಿದ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಸ್ಥಳ ಪರಿಶೀಲನೆ ಮಾಡಿ ವರದಿ ನೀಡಿದಲ್ಲಿ ಉಳಿಕೆ 25000/-ರೂ.ಗಳನ್ನು ಬಿಡುಗಡೆ ಮಾಡುವುದು. ಈ 25000/-ರೂ.ಗಳನ್ನು ವಿನಿಯೋಗಿಸಿ ಕಾರ್ಯಗಾರ ಪೂರ್ಣಗೊಳಿಸಿ ಅಗತ್ಯವಿರುವ ಆಧುನಿಕ ಉಪಕರಣಗಳನ್ನು ಕೊಂಡು ವೃತ್ತಿಯನ್ನು ನಿರ್ವಹಿಸುತ್ತಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಸ್ಥಳ ಪರಿಶೀಲನೆ ಮಾಡಿ ವರದಿ ಮಾಡಬೇಕು.

ಸಾಲದ ಮೊತ್ತವು 1.00 ಲಕ್ಷರೂ.ಗಳಿಗಿಂತ ಕಡಿಮೆಯಾದಲ್ಲಿ ಅನುಕ್ರಮವಾಗಿ ಮೊದಲ ಕಂತು, ಎರಡನೇ ಕಂತು ಮತ್ತು ಮೂರನೇ ಕಂತುಗಳನ್ನು ಶೇ.30:45:25ರ ಅನುಪಾತದಲ್ಲಿ ಬಿಡುಗಡೆಮಾಡಲಾಗುವುದು.

6) <u>ಸಾಲಕ್ಕೆ ಪಡೆಯಬೇಕಾದ ದಸ್ತಾವೇಜುಗಳು:-</u>

(1) ಫಲಾನುಭವಿಗೆ ಮೊದಲನೆ ಕಂತಿನ ಸಾಲದ ಚೆಕ್ಕನ್ನು ವಿತರಿಸುವ ಮುನ್ನ ಸಾಲದ ಒಟ್ಟು ಮೊತ್ತಕ್ಕೆ ದಿನಾಂಕ:07/03/2003ರ ನಿಗಮದ ಸುತ್ತೋಲೆ (ಪರಿಷ್ಕೃತ ದಸ್ತಾವೇಜು) ಅನ್ವಯ ಈ ಕೆಳಕಂಡ ದಸ್ತಾವೇಜುಗಳನ್ನು ಪ್ರತಿ ಫಲಾನುಭವಿಯಿಂದ ಹಾಗೂ ಜಾಮೀನುದಾರರಿಂದ ಸಾಲಕ್ಕೆ ಪಡೆದುಕೊಳ್ಳಬೇಕು.

ಅ. ಪ್ರಾಮಿಸರಿ ನೋಟ್
ಆ. ಡಿ.ಪಿ.ನೋಟ್ ಡೆಲಿವರಿ ಲೆಟರ್
ಇ. ಲೆಟರ್ ಆಫ್ ರೀಪೇಮೆಂಟ್
ಈ. ಹೈಪಾಥೀಕೇಷನ್ ಡೀಡ್
} ಸಾಲಗಾರರಿಂದ ಪಡೆಯುವುದು.

ಉ. ಲೆಟರ್ ಆಫ್ ಗ್ಯಾರಂಟಿ (ಜಾಮೀನುದಾರರಿಂದ)
ಊ.ಸಹಾಯಧನ ಉಪಯೋಗ ಪ್ರಮಾಣ ಪತ್ರ.

(2) ಈ ದಸ್ತಾವೇಜುಗಳ ಅವಧಿ ಲಿಮಿಟೇಷನ್ ಆಕ್ಟ್‌ಅನ್ವಯ 3 ವರ್ಷಗಳ ಮಿತಿಗೆ ಒಳಪಡುತ್ತದೆ. ಆದ್ದರಿಂದ ಈ 3 ವರ್ಷಗಳ ಅವಧಿಯೊಳಗೆ ಸಾಲವು ಮರುಪಾವತಿಯಾಗದಿದ್ದ ಸಂದರ್ಭದಲ್ಲಿ ಫಲಾನುಭವಿಗಳಿಂದ ಹಾಗೂ ಜಾಮೀನುದಾರರಿಂದ ಎ.ಓ.ಡಿಗಳನ್ನು (Acknowledgement of Debt) ಪಡೆಯಬೇಕು.

7) <u>ಮರುಪಾವತಿ</u>:- ಸಾಲದ ಮೊತ್ತವನ್ನು 5 ವರ್ಷಗಳ ಅವಧಿಯಲ್ಲಿ ಎರಡು ಮಾಸಿಕ ವಿರಾಮ ಕಂತುಗಳನ್ನು ಹೊರತುಪಡಿಸಿ 58 ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು.

8) <u>ವಿಮೆ:-</u> ಈ ಯೋಜನೆಯಲ್ಲಿ ಪಡೆಯುವ ಸಾಲದಿಂದ ಉತ್ಪನ್ನವಾಗುವ ಆಸ್ತಿಯನ್ನು ಬೆಂಕಿ, ನೀರು, ಭೂಕಂಪ, ಕಳ್ಳತನ, ಇತ್ಯಾದಿ ಪ್ರಕೋಪಗಳಿಂದ ಆಗುವ ನಷ್ಟವನ್ನು ತಪ್ಪಿಸಲು ವಿಮೆ ಮಾಡಿಸಬೇಕು. ಆ ವಿಮಾ ಪ್ರೀಮಿಯಂ ಮೊತ್ತವನ್ನು ಫಲಾನುಭವಿಗಳು ಭರಿಸಬೇಕು.

ವ್ಯವಸ್ಥಾಪಕ ನಿರ್ದೇಶಕರು.